ಇತ್ಯಾದಿಗಳನ್ನು ಪ್ರತ್ಯಕ್ಷ ಕಂಡು ವರದಿ ಮಾಡಬೇಕಿತ್ತು. ಅದಕ್ಕಾಗಿ ವಿಲ್ಸನ್ ಗಾರ್ಡನ್ ಸ್ಮಶಾನದ ಬಳಿ ಎರಡು–ಮೂರು ದಿವಸ ಅಡ್ಡಾಡಿದ್ದ. ಇವತ್ತು ಅವನಿಗೆ ಹೆಣಯಾತ್ರೆಯನ್ನು ನೋಡುವ ಅವಕಾಶ ಸಿಕ್ಕಿತ್ತು. ಅದನ್ನು ಗಮನಿಸಿ ಸೀದಾ ಕ್ಲಬ್ಬಿಗೆ ಬಂದು ಮೇಲಿನ ವರದಿ ಸಿದ್ಧಪಡಿಸಿದ್ದ. ತಾನು ಕಂಡ ಪಾತ್ರಗಳ ಜೊತೆಗೆ ಇನ್ನೂ ಕೆಲವರನ್ನು ಸೇರಿಸಿಕೊಂಡು ವರದಿಯನ್ನು ರೋಚಕವಾಗಿಸಿದ್ದ. ಕಾಸು ಆರಿಸಿಕೊಳ್ಳುವ ಮಕ್ಕಳು ಇವನದೇ ಕಲ್ಪನೆ.



"ಸಾರಿ ಕಣಮ್ಮಾ, ಸುಡುಗಾಡು ಟ್ರಾಫಿಕ್ಕು" ಅನ್ನುತ್ತಲೇ ಬಂದ ಪ್ರಸನ್ನ ಬೈಟೂ ಕಾಫಿಗೆ ಹೇಳಿ ವೆಂಕಟೇಶನ ಲ್ಯಾಪ್‌ಟಾಪಿನಲ್ಲಿದ್ದ ವರದಿಯನ್ನು ಒಂದೇ ಗುಟುಕಿಗೆ ಓದಿದ. ಭಾವನೆಗಳನ್ನು ತಿಳಿಯಲು ಅವನ ಮುಖವನ್ನೇ ನೋಡುತ್ತಿದ್ದ ವೆಂಕಟೇಶ. ವರದಿಗಿಂತಲೂ ವರದಿಯ ಐಡಿಯಾ ಪ್ರಸನ್ನನಿಗೆ ತುಂಬಾ ಇಷ್ಟವಾಗಿತ್ತು. "ನಿಮ್ ಎಡಿಟರ್ರು ಸೂಪರ್ ಗುರು, ಇಂತಾ ಐಡಿಯಾಗಳೆಲ್ಲಾ ಹೆಂಗ್ ಬರ್ತವೆ ಅವರಿಗೆ? ಪಾಲಿಟಿಕ್ಸ್ ಅಸೈನ್‌ಮೆಂಟು, ಸ್ಪೋರ್ಟ್ಸ್ ಅಸೈನ್‌ಮೆಂಟ್ ತರಾ ಇದು ಡೆತ್ ಅಸೈನ್‌ಮೆಂಟು."

ಒಳ್ಳೆಯ ಟೈಟಲ್ ಸಿಕ್ಕಿತೆಂದು ಮನಸ್ಸಿನಲ್ಲೇ ಅಂದುಕೊಂಡ ವೆಂಕಟೇಶನಿಗೆ ತನ್ನ ವರದಿ ಬಗ್ಗೆ ಯಾವ ಪ್ರತಿಕ್ರಿಯೆಯೂ ಬರದಿದ್ದುದು ಕಂಡು ಒಳಗೇ ನಿರಾಶೆಯಾಯಿತು. ಕೊನೆಗೆ ಬಾಯ್ಬಿಟ್ಟು ಕೇಳಿಯೇಬಿಟ್ಟ. ಇನ್ನೊಂದು ಸಲ ವರದಿ ಕಡೆ ಕಣ್ಣು ಹಾಯಿಸಿದ ಪ್ರಸನ್ನ "ಸ್ವಲ್ಪ ಓವರ್ ಆಯ್ತು" ಅಂದ. ವೆಂಕಟೇಶನಿಗೂ ಮನಸ್ಸಿನ ಮೂಲೆಯಲ್ಲಿ ವರದಿಯು ಅತಿಯಾದ ಭಾವುಕತೆಯಿಂದ ಕೂಡಿದೆ ಎಂಬ ಸಂದೇಹವಿತ್ತು. ಈಗ ಪ್ರಸನ್ನ ನೇರವಾಗಿ ಹೇಳಿದ್ದರಿಂದ ಒಂದು ರೀತಿ ನಿರಾಳವಾದ. ಆದರೆ ಈ ಅಸೈನ್‌ಮೆಂಟನ್ನು ಅವನು ಮುಗಿಸಲೇಬೇಕಿತ್ತು. ಹಾಗಾಗಿ ಏನು ಮಾಡುವುದೆಂದು ಇಬ್ಬರೂ ಚರ್ಚೆ ಮಾಡಿದರು.

"ಸಾವಿನ ಮನೆ ಎಂದರೆ ಕೇವಲ ಹೆಣವನ್ನು ಹೊತ್ತುಕೊಂಡು ಹೋಗಿ ಸುಡುವುದಷ್ಟೇ ಅಲ್ಲ. ಅದೊಂದು ಸುದೀರ್ಘ ಪ್ರಕ್ರಿಯೆ. ಸತ್ತ ವ್ಯಕ್ತಿಯ ಮನೆಯವರು, ಬರುವ ನೆಂಟರು, ಅಕ್ಕ ಪಕ್ಕದ ಮನೆಯವರು, ಸ್ನೇಹಿತರು ಮುಂತಾದ ಅನೇಕ ಜನರ ಪ್ರತಿಕ್ರಿಯೆ ಗಮನಿಸುವುದು ವರದಿಯ ಬಹುಮುಖ್ಯ ಭಾಗ. ಸತ್ತ ತಕ್ಷಣ ಆಗುವ ವಿದ್ಯಮಾನಗಳೇ ಬೇರೆ, ರಾತ್ರಿ ಹೊತ್ತು ಮನೆಯಲ್ಲಿ ಹೆಣ ಇಟ್ಟುಕೊಂಡಾಗ ನಡೆಯುವ ಚಟುವಟಿಕೆಗಳೇ ಬೇರೆ. ಶವವನ್ನು ತೆಗೆದುಕೊಂಡು ಹೋಗುವ ಮುನ್ನ, ಹೋಗುವ ದಾರಿಯಲ್ಲಿ ಮತ್ತು ಅಂತಿಮ ಗಳಿಗೆಯಲ್ಲಿ ಆಗುವ ಘಟನೆಗಳನ್ನು ಗಮನಿಸಿ ದಾಖಲಿಸದಿದ್ದರೆ ವರದಿ ಅಪೂರ್ಣ. ಬೆಂಗಳೂರಿನ